ಯಶೋಧರೆ ಕೇಳಿದಳಂತೆ: 'ನೀನು ಬುದ್ಧನಾಗಲು ಮನೆಯನ್ನು ತೊರೆಯುವುದು ಅನಿವಾರ್ಯವಾಗಿತ್ತೆ?' ಅದಕ್ಕೆ ಬುದ್ಧ ಕೊಟ್ಟ ಉತ್ತರ: 'ಇಲ್ಲ!'

ಸಿದ್ಧಾರ್ಥ ಅರಮನೆಯನ್ನು ತೊರೆದ ಮೇಲೆ ಹಲವು ರೀತಿಯ ಸಾಧನೆಗಳಲ್ಲಿ ತೊಡಗಿದ್ದ. ಹಲವು ರೀತಿಯ ಕಠಿಣರೂಪದ ಸಾಧನೆಗಳೂ ಇದ್ದವು. ಆದರೆ ಅತಿಯಾದ ಭೋಗವಾಗಲೀ ಅತಿಯಾದ ತ್ಯಾಗವಾಗಲೀ ಜೀವನದರ್ಶನಕ್ಕೆ ಪ್ರಯೋಜನಕ್ಕೆ ಬರುವುದಿಲ್ಲ ಎಂಬ ತಿಳಿವಳಿಕೆ ಅವನಲ್ಲಿ ಮೂಡಿತು. ಆಗ ಅವನು ಸಾಧನೆಯಲ್ಲಿ 'ಮಧ್ಯಮಮಾರ್ಗ'ವನ್ನು ಹಿಡಿದ; ಅತಿರೇಕದ ಎರಡು ತುದಿಗಳ ಸಂಕೋಚದ ದಾರಿಯಲ್ಲ ಅದು. ಈ ದಾರಿಯಲ್ಲಿಯೇ ಕೊನೆಗೊಂದು ದಿನ ಅವನಿಗೆ ಬುದ್ಧತ್ವ ಒದಗಿತು. ಬುದ್ಧತ್ವ ಎಂದರೆ ಏನು ಎಂಬುದರ ಅನುಭವ ದಕ್ಕಿತು. ಆ ಅನುಭವದ ಬೆಳಕಿನಲ್ಲಿ ಎಲ್ಲರಿಗೂ ಅವನು ಬುದ್ಧತ್ವದ ರಹಸ್ಯವನ್ನು ಬೋಧಿಸಲು ತೊಡಗಿದ.

ಅಧ್ಯಾತ್ಮ ಎಂದರೆ ಮನೆಯಿಂದ ದೂರ ಓಡಿಹೋಗಬೇಕು; ನಿತ್ಯದ ಬದುಕಿನ ಸುಖವನ್ನು ತ್ಯಜಿಸಬೇಕು; ನೋವಿನಿಂದ ಪಾರಾಗಬೇಕು. ಅದಕ್ಕಾಗಿ ನಮ್ಮ ಶರೀರವನ್ನೂ ಮನಸ್ಸನ್ನೂ ಶಿಕ್ಷಿಸಿಕೊಳ್ಳಬೇಕು; ಹೀಗೆ ಮಾಡುವ ಕಠಿಣತಮವಾದ ತಪಸ್ಸಿನಿಂದ ಮಾತ್ರವೇ ಜ್ಞಾನೋದಯವಾಗುವುದು. ಆಗ ಒದಗುವುದೇ ಬುದ್ಧತ್ವ. ಇದು ನಮ್ಮ ತರ್ಕ.

ಆದರೆ ಬುದ್ಧ ಅವನ ಬುದ್ಧತ್ವದ ಅನುಭವವನ್ನು ಇದಕ್ಕಿಂತಲೂ ಭಿನ್ನ ಎಂದು ಹೇಳಿದನಂತೆ!

ಎಲ್ಲರೂ ಕೂಡ ಹುಟ್ಟಿನಿಂದಲೇ ಬುದ್ಧತ್ವದಲ್ಲಿರುವವರು. ಹೀಗಾಗಿ ಬುದ್ಧತ್ವದ ಸಂಪಾದನೆಗೆ ವಿಶೇಷ ಸಾಧನೆಗಳನ್ನೇನೂ ಮಾಡಬೇಕಾಗಿಲ್ಲ. 'ನಾನು ಬದ್ಧ' ಎಂಬ ಮೋಹ ಅಳಿದು, 'ನಾನು ಬುದ್ಧ' ಎಂಬ ಅರಿವು ನಮ್ಮಲ್ಲಿ ಹುಟ್ಟಬೇಕು. ಈ ಅರಿವೇ ಬುದ್ಧತ್ವ; ಬುದ್ಧತ್ವವೇ ಅರಿವು. ಈಗಾಗಲೇ ನಾವು ಏನಾಗಿದ್ದೇವೋ ಅದನ್ನು ಪಡೆಯಲು ಏಕಾದರೂ ಪ್ರಯತ್ನಿಸಬೇಕು? ಬುದ್ಧತ್ವ ಎನ್ನುವುದು ನಮ್ಮ ಪ್ರಯತ್ನದಿಂದ ಸಿಗುವಂಥ ವಸ್ತು ಎಂದಾದರೆ ಅದು ನಮ್ಮ ಸಹಜಸ್ವಭಾವ ಅಲ್ಲ ಎನ್ನಬೇಕಾಗುತ್ತದೆಯಷ್ಟೆ. ನಮ್ಮದಲ್ಲದ್ದು ನಮ್ಮನ್ನು ಯಾವಾಗ ಬೇಕಾದರೂ ಬಿಟ್ಟುಹೋಗಬಹುದು. ಹೀಗೆ ನಮ್ಮನ್ನು ತೊರೆದು ಹೋಗುವಂಥದ್ದು ನಮಗೆ ಶಾಶ್ವತವಾದ ಸುಖವನ್ನಾಗಲೀ ಆನಂದವನ್ನಾಗಲೀ ಹೇಗೆ ಕೊಡಬಲ್ಲದು?

ಶುದ್ಧವಾದ ಮನಸ್ಸನ್ನು ಪಡೆಯಬೇಕು; ಅದರ ಮೂಲಕವಾಗಿ ಬುದ್ಧತ್ವವನ್ನು ಹೊಂದಬೇಕು. ಇದು ಮಾ–ತ್ಸುವಿನ ಎಣಿಕೆ; ಇದಕ್ಕಾಗಿಯೇ ಅವನು ಯಾವಾಗಲೂ ಏಕಾಂತದಲ್ಲೇ ಇರುತ್ತಿದ್ದ; ಆ ಏಕಾಂತದಲ್ಲಿ ಧ್ಯಾನದಲ್ಲಿಯೇ ಮುಳುಗಿರುತ್ತಿದ್ದ. ಆದರೆ ಬುದ್ಧತ್ವವು ನಮ್ಮ ಮನಸ್ಸಿನ ಶುದ್ಧ–ಅಶುದ್ಧಗಳನ್ನು ಮೀರಿದ ಸ್ಥಿತಿ. ಶುದ್ಧ–ಅಶುದ್ಧ ಎನ್ನುವುದು ಎರಡು ವಿರೋಧದ ಗುಣಗಳು; ಕತ್ತಲು–ಬೆಳಕುಗಳು ಇದ್ದಂತೆ; ಸುಖ–ದುಃಖಗಳಿದ್ದಂತೆ. ಆದರೆ ಬುದ್ಧತ್ವ ಇಂಥ ವಿರೋಧದ ಎರಡು ಬಿಂದುಗಳಲ್ಲಿ ಯಾವುದೋ ಒಂದನ್ನು ಒಳಗೊಂಡಿರುವಂಥದ್ದಲ್ಲ. ಅದು ಹೀಗೆ ಒಡೆದು ಆಳುವಂಥ ಪರಕೀಯದ ಬುದ್ಧಿವಂತಿಕೆಯಲ್ಲ; ಎಂದಿಗೂ ನಮ್ಮಲ್ಲಿಯೇ ಒಂದಾಗಿರುವಂಥ ಸ್ವಕೀಯದ ಪ್ರಜ್ಞೆ. ಹೆಂಚನ್ನು ಎಷ್ಟು ಉಜ್ಜಿದರೂ ಅದು ಕನ್ನಡಿಯಾಗದು; ಅದು ಸವೆಯಬಹುದು ಅಥವಾ ಒಡೆಯಬಹುದು, ಅಷ್ಟೆ. ಹೀಗೆಯೇ ನಾವು ನಮ್ಮ ಶರೀರವನ್ನೋ ಮನಸ್ಸನ್ನೋ ಯಾವುದೋ ಹೊರಗಿನ ಕ್ರಿಯೆಗಳಲ್ಲಿ ತೊಡಗಿಸುವುದರಿಂದ ಅದಕ್ಕೆ ಬುದ್ಧತ್ವದ ಹೊಳಪು ಬರದು. 'ಬುದ್ಧತ್ವ ಎಂಬ ಹೊಳಪೇ ನಮ್ಮ ಸಹಜತೆ; ಈ ಕನ್ನಡಿಗೆ ಅವಿದ್ಯೆ ಎಂಬ ದೂಳು ಅಂಟಿಕೊಂಡಿದೆ. ಆದ ಕಾರಣ ಕನ್ನಡಿಯ ಹೊಳಪು ನಮಗೆ ಕಾಣದಾಗಿದೆ. ನಾವು ಆ ದೂಳನ್ನು ಜಾಡಿಸಬೇಕು; ಆಗ ಕನ್ನಡಿ ತಾನೇ